O.S. 141/2019
P.W.1

**ಸಾಕ್ಷಿಯನ್ನು ದಿನಾಂಕಃ 22-08-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ**

ನನ್ನ ತಂದೆಯ ತಂದೆ ಅಂದರೆ ನನ್ನ ಅಜ್ಜನ ಹೆಸರು ಕಾಳಪ್ಪ ಎಂದು ಇರುವುದು. ಕಾಳಪ್ಪನಿಗೆ 5 ಜನ ಮಕ್ಕಳು. ಕಾಳಪ್ಪನ ಮಕ್ಕಳ ನಡುವೆ ಪಾಲು ವಿಭಾಗವಾಗಿರುತ್ತದೆ. ಆ ಬಗ್ಗೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸದರಿ ಪಾಲು ವಿಭಾಗದಲ್ಲಿ ಎಲ್ಲರಿಗೂ 18 ಎಕರೆ ಬಂದಿರುತ್ತದೆ. ಪಾಲು ವಿಭಾಗದಲ್ಲಿ ನನ್ನ ತಂದೆಗೆ ದಾವಾ ಸ್ವತ್ತುಗಳು ಬಂದಿವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆ ಒಟ್ಟು ಕುಟುಂಬದಿಂದ ಯಾವಾಗ ಬೇರೆಯಾದರು ಎಂದು ನನಗೆ ಗೊತ್ತಿರುವುದಿಲ್ಲ. 7 ನೇ ದಾವಾ ಆಸ್ತಿ ಪಾಲು ವಿಭಾಗವಾಗಿದ್ದರೂ ಕೂಡ ಪಹಣಿ ಜಂಟಿ ಹೆಸರಿನಲ್ಲಿ ಬರುತ್ತಿರುವ ಕಾರಣ ನನ್ನ ತಂದೆಯ ಸಹೋದರರನ್ನು ಸೇರಿಸಿ ಪಕ್ಷಗಾರರನ್ನಾಗಿ ಮಾಡಿದ್ದೇನೆ. 7 ನೇ ದಾವಾ ಆಸ್ತಿಯಲ್ಲಿ ನನ್ನ ತಂದೆ ಹಾಗೂ ಸಹೋದರರಿಗೆ ತಲಾ 3 ಎಕರೆ ಬರಬೇಕು. 11 ಎಕರೆ 68 ಸೆಂಟ್ಸ್ ಪೈಕಿ ನನ್ನ ತಂದೆಗೆ 3 ಎಕರೆ ಬಂದಿರುತ್ತದೆ ಎಂದು ತೋರಿಸಲು ದಾಖಲೆ ಇರುವುದಿಲ್ಲ.

4 ನೇ ಪ್ರತಿವಾದಿಯ ಗಂಡನಾದ ಹಾಲಪ್ಪನ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅವರಿಗೆ ಮಕ್ಕಳು ಇರುವರು ಎಂದರೆ ಸರಿ. ನನ್ನ ತಂದೆ ಹಾಗೂ ಅವರ ಸಹೋದರರು ಬೇರೆಯಾಗಿರುವುದಿಲ್ಲ ಮತ್ತು ದಾವಾ ಆಸ್ತಿಯ ಮೇಲೆ ಎಲ್ಲಾ ಸಹೋದರರಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯರು ನನ್ನನ್ನು ಓದಿಸಿ ನೌಕರಿ ಸಿಗುವಂತೆ ಮಾಡಿದ್ದಾರೆ ಎಂದರೆ ನಾನು ಕೂಡ ಕಷ್ಟ ಪಟ್ಟಿದ್ದೇನೆ. ಫೀಸನ್ನು ತಂದೆ ತಾಯಿ ನೀಡಿರುವರು ಎಂದರೆ ನಾನು ಸರಕಾರಿ ಶಾಲೆಯಲ್ಲಿ ಓದಿದ ಕಾರಣ ಅಲ್ಪ ಪ್ರಮಾಣದಲ್ಲಿ ಖರ್ಚು ಬಂದಿತ್ತು.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

22.08.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**